# ಉಪತಹಶೀಲ್ದಾರವರ ನ್ಯಾಯಾಲಯ, ಕೋಗಳಿ, ಹ.ಬೊ.ಹಳ್ಳಿ ತಾಲೂಕು.

ಸಂ/ಕಂ/ಪಹಣಿ/ವಿವಾದ/08/2016-17 ದಿನಾಂಕ:21.10.2016

ಉಪಸ್ಥಿತರು:-ವಿ.ಹೆಚ್.ಮಲ್ಲಿಕಾರ್ಜುನ,
ಉಪ ತಹಶೀಲ್ದಾರರು,
ನಾಡ ಕಾರ್ಯಾಲಯ, ಕೋಗಳಿ

| ಅರ್ಜಿದಾರರು | ತಕರಾರುದಾರರು |
|---|---|
| ಶ್ರೀ ಡಿ.ನೂರುಲ್ಲಾ ತಂದೆ ಡಿ.ಎಂ.ಅಬ್ದುಲ್ ಸಾಬ್<br>ಗ್ರಾಮ:- ಹೆಚ್.ಬಿ.ಹಳ್ಳಿ ತಾ:-ಹೆಚ್.ಬಿ.ಹಳ್ಳಿ<br>[ಶ್ರೀ ಉಮಾಶಂಕರ್, ವಕೀಲರು, ಹ.ಬೊ.ಹಳ್ಳಿ] | ಶ್ರೀ ಚಿಂತ್ರಪಳ್ಳಿ ಗಣೇಶ ತಂದೆ ಲೇಟ್ ತಿಂದಪ್ಪ<br>ಗ್ರಾಮ:-ಹರೇಗೊಂಡನಹಳ್ಳಿ ತಾ:-ಹ.ಬೊ.ಹಳ್ಳಿ<br>[ಶ್ರೀ ಬಿ.ಎಂ.ಆಂಜನೇಯ, ವಕೀಲರು,ಹ.ಬೊ.ಹಳ್ಳಿ] |

**ವಿವಾದಿತ ಜಮೀನಿನ ವಿವರ:**

| ಕ್ರ.ಸಂ. | ತಾಲೂಕು | ಗ್ರಾಮ | ಸ.ನಂ. | ವಿಸ್ತೀರ್ಣ(ಎಕರೆಗಳಲ್ಲಿ) | ತರಹೆ |
|---|---|---|---|---|---|
| 1. | ಹಗರಿಬೊಮ್ಮನಹಳ್ಳಿ | ಹರೇಗಂಡನಹಳ್ಳಿ | 162/1 | 1-00 | ಖುಷ್ಕಿ |

**ಪೀಠಿಕೆ:-**

ಬಳ್ಳಾರಿ ಜಿಲ್ಲೆ ಹಗರಿಬೊಮ್ಮನಹಳ್ಳಿ ತಾಲೂಕಿನ ಹರೇಗಂಡನಹಳ್ಳಿ ಗ್ರಾಮದ ವಿವಾದಿತ ಜಮೀನಿಗೆ ಸಂಬಂಧಿಸಿದಂತೆ, ಬಳ್ಳಾರಿ ಜಿಲ್ಲೆ ಹಗರಿಬೊಮ್ಮನಹಳ್ಳಿ ತಾಲೂಕಿನ ಹ.ಬೊ.ಹಳ್ಳಿ ಗ್ರಾಮದ ನಿವಾಸಿಯಾದ ಡಿ.ನೂರುಲ್ಲಾ ತಂದೆ ಡಿ.ಎಂ.ಅಬ್ದುಲ್ ಸಾಬ್ ಇವರು ಬಳ್ಳಾರಿ ಜಿಲ್ಲೆ ಹಗರಿಬೊಮ್ಮನಹಳ್ಳಿ ತಾಲೂಕಿನ ಹರೇಗೊಂಡನಹಳ್ಳಿ ಗ್ರಾಮದ ಅನ್ವೇರಿ ಹನುಮವ್ವ ಗಂಡ ಲೇಟ್ ರಾಮಪ್ಪ ಇವರಿಂದ ನೋಂದಾಯಿತ ಕ್ರಯ ದಸ್ತಾವೇಜು ಸಂಖ್ಯೆ ಹೆಚ್.ಬಿ.ಹೆಚ್-1-00835-2016-2017 ದಿನಾಂಕ:01.06.2016 ರಂದು ಮೊತ್ತ ರೂ:65,000/-ಕ್ಕೆ ಖರೀದಿಸಿರುತ್ತಾರೆ. ಗ್ರಾಮದಲ್ಲಿ ನಮೂನೆ-21ರ ನೋಟೀಸನ್ನು ದಿನಾಂಕ:03.06.2016 ರಂದು ಜಾರಿಮಾಡಲಾಗಿ, ನಿಗದಿತ ಅವಧಿಯೊಳಗೆ ಅಂದರೆ ದಿನಾಂಕ:20.06.2016 ರಂದು ಚಿಂತ್ರಪಳ್ಳಿ ಗಣೇಶ ತಂದೆ ಲೇಟ್ ತಿಂದಪ್ಪ ಇವರು ತಕರಾರು ಅರ್ಜಿಯನ್ನು ಸಲ್ಲಿಸಿರುತ್ತಾರೆ. ಕಾರಣ, ಎಂ.ಆರ್.ನಂ.52/15-16 ರ ಕಡತವು ವಿವಾದಾಸ್ಪದ ಪ್ರಕರಣವೆಂದು ಪರಿಗಣಿಸಿ ಕಂದಾಯ ನಿರೀಕ್ಷಕರು, ಕೋಗಳಿ ಇವರು ಈ ಕಾರ್ಯಾಲಯಕ್ಕೆ ವರದಿ ಸಲ್ಲಿಸಿರುತ್ತಾರೆ. ಉಭಯ ಪಕ್ಷಕಾರರಿಗೆ ದಿನಾಂಕ:11.08.2016ಕ್ಕೆ ವಿಚಾರಣೆಗೆ ಹಾಜರಾಗಲು ನೋಟೀಸನ್ನು ಜಾರಿ ಮಾಡಲಾಯಿತು.

ಪ್ರಕರಣವನ್ನು ದಿನಾಂಕ:11.08.2016 ಮರಿಂದ 20.10.2016 ರವರೆಗೆ ವಿಚಾರಣೆಯನ್ನು ಮಾಡಲಾಯಿತು. ಉಭಯರು ಹಾಜರಾಗಿರುತ್ತಾರೆ. ಅರ್ಜಿದಾರರ ಪರ ಶ್ರೀ ಉಮಾಶಂಕರ್, ವಕೀಲರು ತಮ್ಮ ವಕಾಲತ್ತು ಅರ್ಜಿಯನ್ನು ಸಲ್ಲಿಸಿರುತ್ತಾರೆ. ಸಲ್ಲಿಸಿ, ಕ್ರಯ ಪತ್ರ, ಇ.ಸಿ.,ಮ್ಯುಟೇಷನ್ ಪ್ರತಿ ಹಾಗೂ ಪಹಣಿ ಪತ್ರಿಕೆ ಹಾಜರುಪಡಿಸಿರುತ್ತಾರೆ. ತಕರಾರುದಾರರ ಪರ ಬಿ.ಎಂ.ಆಂಜನೇಯ, ವಕೀಲರು ಹಾಜರಾಗಿ ತಮ್ಮ ವಕಾಲತ್ತು ಅರ್ಜಿಯನ್ನು ಸಲ್ಲಿಸಿರುತ್ತಾರೆ.

ಮುಂದುವರೆದು ದಿನಾಂಕ:22.09.2016 ರಂದು ಉಭಯರು ಹಾಜರಾಗಿರುತ್ತರೆ. ಪ್ರಕರಣದಲ್ಲಿ ತಕರಾರುದಾರರ ಪರ ವಕೀಲರು ಹೇಳುವಂತೆ;

ಮಾನ್ಯ ಸಹಾಯಕ ಆಯುಕ್ತರ ನ್ಯಾಯಾಲಯ, ಹೊಸಪೇಟೆ ಇವರ ನ್ಯಾಯಾಲಯದಲ್ಲಿ ಪ್ರಕರಣ ನಡೆಯುತ್ತಿರುವುದರಿಂದ ಯಥಾಸ್ಥಿತಿ ಕಾಪಡುಕೊಳ್ಳಲು ಕೋರಿರುತ್ತಾರೆ. ಹಾಗೂ ಸದರಿ ನ್ಯಾಯಾಲಯದ ಪ್ರತಿಯನ್ನು ಹಾಜರುಪಡಿಸಿರುತ್ತಾರೆ.

ಅರ್ಜಿದಾರರ ಪರ ವಕೀಲರು ಹೇಳುವಂತೆ; ನೋಂದಾಯಿತ ದಸ್ತಾವೇಜು ಪ್ರಕಾರ ಅರ್ಜಿದಾರರ ಹೆಸರಿಗೆ ಹಕ್ಕು ಬದಲಾವಣೆ ಮಾಡಲು ಕೋರಿರುತ್ತಾರೆ.

ಪ್ರಕರಣದಲ್ಲಿ ದಿನಾಂಕ;20.10.2016 ರಂದು ಉಭಯರು ಹಾಜರಾಗಿರುತ್ತಾರೆ. ಅರ್ಜಿದಾರರು ಪರ ವಕೀಲರು ಹಾಜರಾಗಿ ಹೇಳುವಂತೆ; ನೋಂದಾಯಿತ ಕ್ರಯ ಪತ್ರದ ಪ್ರಕಾರ ಅರ್ಜಿದಾರರ/ಕ್ರಯದಾರರ ಹೆಸರಿಗೆ ಹಕ್ಕು ಬದಲಾವಣೆ ಮಾಡಲು ಕೋರಿರುತ್ತಾರೆ.

ಪ್ರಕರಣದಲ್ಲಿ ಅರ್ಜಿದಾರರು ಮತ್ತು ತಕರಾರುದಾರು ನೀಡಿದ ಹೇಳಿಕೆ ಮತ್ತು ದಾಖಲೆಗಳನ್ನು ಪರಿಶೀಲನೆ ಮಾಡಲಾಗಿ, ಕ್ರಯದಾರರಾದ ಡಿ.ನೂರುಲ್ಲಾ ತಂದೆ ಡಿ.ಎಂ.ಅಬ್ದುಲ್ ಸಾಬ್ ಇವರು ಬಳ್ಳಾರಿ ಜಿಲ್ಲೆ ಹಗರಿಬೊಮ್ಮನಹಳ್ಳಿ ತಾಲೂಕಿನ ಹರೇಗೊಂಡನಹಳ್ಳಿ ಗ್ರಾಮದ ಅನ್ವೇರಿ ಹನುಮವ್ವ ಗಂಡ ಲೇಟ್ ರಾಮಪ್ಪ ಇವರಿಂದ ನೋಂದಾಯಿತ ಕ್ರಯ ದಸ್ತಾವೇಜು ಸಂಖ್ಯೆ ಹೆಚ್.ಬಿ.ಹೆಚ್-1-00835-2016-2017 ದಿನಾಂಕ:01.06.2016 ರಂದು ಮೊತ್ತ ರೂ:65,000/-ಕ್ಕೆ ಖರೀದಿಸಿರುವುದು ಕಂಡುಬಂದಿರುತ್ತದೆ. ನೋಂದಾಯಿತ ದಸ್ತಾವೇಜುಗಳನ್ನು ಕಂದಾಯ ಅಧಿಕಾರಿಗಳಿಗೆ ಮ್ಯುಟೇಷನ್ ಬದಲಾವಣೆಗೆ ಸಲ್ಲಿಸಿದಲ್ಲಿ, ಕಂದಾಯ ಅಧಿಕಾರಿಗಳು ಕರ್ನಾಟಕ ಭೂಕಂದಾಯ ಕಾಯ್ದೆ 1964ರ ಕಲಂ 128 ಮತ್ತು 129 ರನ್ವಯ ಅಂತಹ ನೋಂದಾಯಿತ ದಸ್ತಾವೇಜಿಗೆ ಚಾಲನೆ ನೀಡತಕ್ಕದ್ದು. ಕಂದಾಯ ಅಧಿಕಾರಿಗಳಿಗೆ ಅಂತಹ ದಸ್ತಾವೇಜಿನ ನೈಜತೆಯನ್ನು ನಿರ್ಣಯಿಸುವ ಅಧಿಕಾರ ಇರುವುದಿಲ್ಲದ ಪ್ರಯುಕ್ತ, ನೋಂದಾಯಿತ ಕ್ರಯ ಪ್ರಕಾರ ಕ್ರಯದಾರರ ಹೆಸರಿಗೆ ಹಕ್ಕುಬದಲಾವಣೆ ಮಾಡಲು ಈ ಕೆಳಕಂಡಂತೆ ಆದೇಶ;

## -:ಆದೇಶ:-

ಪೀಠಿಕೆಯಲ್ಲಿ ವಿವರಿಸಿದ ಸಂದರ್ಭ, ವಾಸ್ತವಾಂಶ, ಹಿನ್ನಲೆ ಮತ್ತು ಕಾರಣಗಳ ಆಧಾರದ ಮೇಲೆ ಹಾಗೂ ಕರ್ನಾಟಕ ಭೂಕಂದಾಯ ಕಾಯ್ದೆ 1964ರ ಕಲಂ 128 ಮತ್ತು 129 ರನ್ವಯ ಮತ್ತು ಎಂ.ಆರ್.ನಂ.52/2015-16 ರ ಪ್ರಕಾರ, ಹರೇಗೊಂಡನಹಳ್ಳಿ ಗ್ರಾಮದ ಸ.ನಂ. 162/1 ವಿಸ್ತೀರ್ಣ 1-00 ಎಕರೆ ಜಮೀನು ಕ್ರಯದಾರರಾದ ಡಿ.ನೂರುಲ್ಲಾ ತಂದೆ ಡಿ.ಎಂ.ಅಬ್ದುಲ್ ಸಾಬ್ ಇವರ ಹೆಸರಿಗೆ ನೋಂದಾಯಿತ ಕ್ರಯ ಪ್ರಕಾರ ಹಕ್ಕುಬದಲಾವಣೆ ಮಾಡಲು ಆದೇಶಿಸಿದೆ.

ಈ ಆದೇಶವನ್ನು ಹೇಳಿ ಬರೆಯಿಸಿ, ಗಣಕೀಕರಣ ಮಾಡಿಸಿ, ತಪ್ಪುಗಳನ್ನು ಸರಿಪಡಿಸಿ, ಈ ದಿನ ದಿನಾಂಕ:21.10.2016 ರಂದು ತೆರದ ನ್ಯಾಯಾಲಯದಲ್ಲಿ ಘೋಷಿಸಿದೆ.

21/10/16

[ವಿ.ಹೆಚ್.ಮಲ್ಲಿಕಾರ್ಜುನ]
ಉಪ ತಹಶೀಲ್ದಾರರು,
ನಾಡ ಕಾರ್ಯಾಲಯ, ಕೋಗಳಿ

ಉಪ ತಹಶೀಲ್ದಾರರು
ನಾಡ ಕಛೇರಿ, ಕೋಗಳಿ

copy Recieved
Advocate for
Petitioners
7/11/2016

ಪ್ರತಿಯನ್ನು:-

1. ಅರ್ಜಿದಾರರು ಮತ್ತು ತಕರಾರುದಾರರಿಗೆ.
2. ಭೂಮಿ ಕೇಂದ್ರ, ತಾಲೂಕು ಕಛೇರಿ, ಹಗರಿಬೊಮ್ಮನಹಳ್ಳಿ ಇವರಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ.
3. ಕಂದಾಯ ನಿರೀಕ್ಷಕರು, ಕೋಗಳಿ.
4. ಶುದ್ಧಪ್ರತಿ ಕಡತಕ್ಕೆ.